ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: Reg. disqualified Members of K.d

ಪತ್ರಿಕೆಯ ಹೆಸರು : NAME OF THE NEWS PAPER : Vijayakarnataka ದಿನಾಂಕ : DATE : 28.11.2019

# ಅನರ್ಹರು ಮೆಂಟಲ್ ಆಸ್ಪತ್ರೆಗೆ ಹೋಗಲಿ!

**ಅಥಣಿ:** 'ಅನರ್ಹರು ತಾವು ಅರ್ಹರೆಂದು ಭಾವಿಸಿದ್ದರೆ ಅವರ ಮಾನಸಿಕ ಆರೋಗ್ಯ ಸರಿ ಇಲ್ಲದಿರಬಹುದು. ಅವರು ತಕ್ಷಣ ಮೆಂಟಲ್ ಆಸ್ಪತ್ರೆಗೆ ಹೋಗಬೇಕು' ಎಂದು ಎಂದು ಮಾಜಿ ಸ್ಪೀಕರ್ ರಮೇಶಕುಮಾರ್ ವಾಗ್ದಾಳಿ ನಡೆಸಿದ್ದಾರೆ. ಇದಕ್ಕೆ ಬಿಜೆಪಿಯಿಂದ ಪ್ರತಿ ವಾಗ್ದಾಳಿ ನಡೆದಿದ್ದು, ರಮೇಶ್ ಅವರ ರಾಜಕಾರಣದ ನೈತಿಕ ಮಟ್ಟವನ್ನು ಅವರದ್ದೇ ಪಕ್ಷದ ಮುನಿಯಪ್ಪ ಹೇಳ್ತಾರೆ ಎಂದು ಸಚಿವ ಸಿ.ಟಿ. ರವಿ ತಿರುಗೇಟು ನೀಡಿದ್ದಾರೆ.

ಅಥಣಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಮೇಶ್ ಕುಮಾರ್, ''ಸಂವಿಧಾನವನ್ನು ಎಲ್ಲರೂ ಗೌರವಿಸಬೇಕು. 2023ರ ವರೆಗೆ ಚುನಾವಣೆಗೆ ನಿಲ್ಲಬಾರದೆಂದು 17 ಶಾಸಕರನ್ನ ಅನರ್ಹರನ್ನಾಗಿ ಮಾಡಿದ್ದೆ. ನಾನು ಕೊಟ್ಟ ತೀರ್ಪನ್ನು ಸುಪ್ರೀಂ ಎತ್ತಿ ಹಿಡಿದು ಚುನಾವಣೆಗೆ ಸ್ಪರ್ಧಿಸುವ ಅವಕಾಶ ನೀಡಿದೆ. ಈಗ ಮತದಾರರು ಸಂವಿಧಾನ ಅಥವಾ ಅನರ್ಹರು ನೀಡಿದ ಹಣ ಎತ್ತಿ ಹಿಡಿಯುತ್ತಾರೋ ಎಂಬುವುದು ಡಿ. 5ರಂದು ಗೊತ್ತಾಗಲಿದೆ'' ಎಂದರು.



''ರಾಜಕೀಯದಲ್ಲಿ ಎಲ್ಲವನ್ನೂ ಮಾಡಿ ಏನೂ ಮಾಡಿಲ್ಲವೆಂಬಂತೆ ಮಾತನಾಡುವವರಲ್ಲಿ ರಮೇಶ್ ಕುಮಾರ್ ಪ್ರಮುಖರು. ಅವರ ರಾಜಕಾರಣ ಗರತೀಯ ರಾಜಕಾರಣನೋ.. ಪತಿತೇಯ ರಾಜಕಾರಣನೋ.. ಎಂಬುದನ್ನು ಮಾಜಿ ಕೇಂದ್ರ ಸಚಿವ ಕೆ.ಎಚ್. ಮುನಿಯಪ್ಪ ಅವರ ಬಾಯಲ್ಲಿ ಕೇಳೋದು ಸೂಕ್ತ. ಕೋಲಾರದಲ್ಲಿ ಮುನಿಯಪ್ಪ ಸೋತ ವಿಚಾರ ಕಾಂಗ್ರೆಸ್ ಸಭೆಯಲ್ಲಿಯೇ ಸ್ಫೋಟವಾಗಿದೆ. ಹೀಗಾಗಿ ರಮೇಶ್‌ಕುಮಾರ್ ಅವರ ರಾಜಕಾರಣದ ನೈತಿಕತೆ ಯಾವ ಮಟ್ಟದ್ದು ಅಂತ ಹೇಳಲು ಮುನಿಯಪ್ಪ ಸಾಕು,'' ಎಂದು ಸಚಿವ ರವಿ ಹೇಳಿದ್ದಾರೆ.

● ವಿಶ್ರಾಂತಿಗಾಗಿ ಮಂತ್ರಾಲಯಕ್ಕೆ ಹೋಗಿದ್ದಾಗ ಸಿದ್ದರಾಮಯ್ಯ ಲೋಕಸಭೆ ಚುನಾವಣೆ ನಂತರ ಕುಮಾರಸ್ವಾಮಿ ಸರಕಾರ ಉಳಿಯುವುದಿಲ್ಲ ಎಂದು ಹೇಳಿದ್ದರು ಮತ್ತು ಆ ಮಾತಿನಂತೆ ಅವರು ನಡೆದುಕೊಂಡಿದ್ದಾರೆ. ಸರಕಾರದ ಪತನಕ್ಕೆ ಕಾರಣರಾದ ಸಿದ್ದರಾಮಯ್ಯ ಅವರೇ ನಿಜಕ್ಕೂ ಅನರ್ಹರಾದವರು. 17 ಜನ ಶಾಸಕರಲ್ಲ.

**ನಳಿನ್‌ಕುಮಾರ ಕಟೀಲ್** ಬಿಜೆಪಿ ರಾಜ್ಯಾಧ್ಯಕ್ಷ (ಕಾಗವಾಡ)

## ದ್ರೋಹಿಗಳೆಂದ ದೇವನೂರು

● ಅನರ್ಹ ಶಾಸಕರು ಮತದಾರರನ್ನೇ ಮಾರಾಟ ಮಾಡಿದ್ದಾರೆ. ಜನತಂತ್ರ ವ್ಯವಸ್ಥೆಯನ್ನು ಗಲೀಜು ಮಾಡಿ ಮತ್ತೆ ಚುನಾವಣೆಗೆ ಸ್ಪರ್ಧಿಸಿದ ಇವರನ್ನು ದ್ರೋಹಿ, ನಮಾಕ್ ಹರಾಮ್ ಎನ್ನಬೇಕು. ಹಳ್ಳಿ ಕಡೆ ಒಂದು ಬೈಗುಳ ಇದೆ. ನನಗೆ ಅದನ್ನು ಹೇಳಲು ಮನಸ್ಸಾಗುತ್ತಿಲ್ಲ

**-ದೇವನೂರು ಮಹಾದೇವ** ಸಾಹಿತಿ (ಮೈಸೂರು)

● ಅನರ್ಹರ ಹಣವೂ ಹೋಗಲಿ, ಗುಣವೂ ಹೋಗಲಿ ಎಂದು ಸ್ಪರ್ಧೆಗೆ ಸುಪ್ರೀಂ ಕೋರ್ಟ್ ಅವಕಾಶ ನೀಡಿದೆ. ಜನತಾ ನ್ಯಾಯಾಲಯವೇ ಅನರ್ಹರಿಗೆ ಸೂಕ್ತ ಶಿಕ್ಷೆ ನೀಡಲಿ ಕೋರ್ಟ್ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡಿದೆ

**-ಎಸ್.ಆರ್.ಪಾಟೀಲ**
ಪ್ರತಿಪಕ್ಷ ನಾಯಕ, ಪರಿಷತ್

6